ಅಧ್ಯಕ್ಷರು:- ಪ್ರಸ್ತಾವ ಏನೆಂದರೆ;

"1998ರ ಕರ್ನಾಟಕ ಪೋಲೀಸ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ ಬೈರೇಗೌಡ (ಕೃಷಿ ಸಚಿವರು) (ಮಾನ್ಯ ಶ್ರೀ ಜೆ.ಹೆಚ್.ಪಟೇಲ್, ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೆ, 1998 ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಹಿರೇಕೆರೂರು ತಾಲ್ಲೂಕಿನ ಅಂಜುಮನ್ ಸಂಸ್ಥೆಯಲ್ಲಿನ ವಿದ್ಯಾರ್ಥಿಗಳ ಫಲಿತಾಂಶ ತಡೆಹಿಡಿದಿರುವುದು

ಶ್ರೀ ಯು.ಬಿ ಬಣಕಾರ್(ಹಿರೇಕೆರೂರು):- ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದವನ್ನು ಅರ್ಪಿಸುತ್ತೇನೆ. ಮಾನ್ಯ ಶಿಕ್ಷಣ ಸಚಿವರಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತೇನೆ. ಹಿರೇಕೆರೂರು ತಾಲ್ಲೂಕು ರಟ್ಟೀಹಳ್ಳಿಯಲ್ಲಿ 1980 ರಿಂದ ಅಂಜೂಮನ್ ಸಂಸ್ಥೆಯಿಂದ ಅನುದಾನ ರಹಿತ ಶಿಕ್ಷಣ ಸಂಸ್ಥೆ ನಡೆಯುತ್ತಿದೆ. ಈ ಒಂದು ಶಾಲೆ ರಾಷ್ಟ್ರೀಯ ಶಿಕ್ಷಣ ಸಮಿತಿಯಿಂದ ಸಹ ಮನ್ನಣೆಪಡೆದಿದೆ. ಈ ಸಂಸ್ಥೆಯವರು 1993-94 ನೇ ಇಸವಿಯಲ್ಲಿ ತಮಗೆ ಮಂಜೂರಾತಿ ಕೊಟ್ಟ 30 ವಿದ್ಯಾರ್ಥಿಗಳ ಜೊತೆಗೆ 40 ಹೆಚ್ಚು ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಸಿಕೊಂಡಿದ್ದರು. ಈ 40 ವಿದ್ಯಾರ್ಥಿಗಳಿಂದ ಪರೀಕ್ಷೆಯ ಫೀಯನ್ನು ತೆಗೆದುಕೊಂಡು ಅರರಿಗೆ ಪ್ರವೇಶ ಪತ್ರಿಕೆಯನ್ನು ಕೊಟ್ಟು, 1993-94ರಲ್ಲಿ ಮೊದಲನೇ ವರ್ಷದ ಪರೀಕ್ಷೆಗೆ ಮತ್ತು 1994-95 ರಲ್ಲಿ ಎರಡನೇ ವರ್ಷದ ತರಗತಿಯ ಪರೀಕ್ಷೆಗೆ ಕೂಡಲು ಅನುಮತಿಯನ್ನು ಸಹ ಕೊಡಲಾಗಿತ್ತು. ಆ ರೀತಿ ಅವರು ಪರೀಕ್ಷೆಗೂ ಸಹ ಕುಳಿತುಕೊಂಡಿದ್ದರು. ಅದರೆ ಮೂರ್ನಾಲ್ಕು ವರ್ಷ ಆದರೂ ಸಹ ಆ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶವನ್ನು ಇದುವರೆಗೂ ಆ ಮಂಡಲಿ ಘೋಷಣೆ ಮಾಡಿಲ್ಲ. ಇದರಿಂದ ವಿದ್ಯಾರ್ಥಿಗಳು ಮತ್ತು ಅವರ ಪಾಲಕರು ಮೂರ್ನಾಲ್ಕು ವರ್ಷಗಳಿಂದ ಮಾನಸಿಕವಾಗಿ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಹೆಚ್ಚುವರಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಂಡಿದ್ದು ಆ ಶಾಲೆಯ ತಪ್ಪು. ಶಾಲೆ ಮಾಡಿದ ತಪ್ಪಿಗೆ ವಿದ್ಯಾರ್ಥಿಗಳಿಗೆ ತೊಂದರೆ ಕೊಡುವುದು ಸರಿಯಲ್ಲ. ಆದ್ದರಿಂದ 40 ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶವನ್ನು ತಡೆಹಿಡಿದಿದ್ದಾರೆ, ಅದನ್ನು ಕೂಡಲೇ ಘೋಷಣೆ ಮಾಡಲು ಸರ್ಕಾರ ಕ್ರಮಕೈಗೊಳ್ಳಬೇಕೆಂದು ವಿನಂತಿಮಾಡಿಕೊಳ್ಳತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ವಾರ್ತಾ ಮತ್ತು ಪ್ರಚಾರ ಸಚಿವರು):- ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಮಾನ್ಯ ಬಣಕಾರ್‌ರವರು ಪ್ರಸ್ತಾಪಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತರಿಸಿ ನಾಡಿದ್ದು ವರದಿಯನ್ನು ಕೊಡುತ್ತೇನೆ.